Akashvani: Bangalore
National News In Kannada
10.11.2025 1.10 pm
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
10.11.2025 1.10 pm
***************

**ಮುಖ್ಯಾಂಶಗಳು**

**೧. ಲುವಾಂಡದಲ್ಲಿ ಇಂದು ಅಂಗೋಲಾದ ರಾಷ್ಟ್ರೀಯ ಸಂಸತ್ ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ**

**೨. ನಾಳೆಯಿಂದ ಎರಡು ದಿನ ಪ್ರಧಾನಿ ನರೇಂದ್ರ ಮೋದಿ ಭೂತಾನ್ ಗೆ ಭೇಟಿ; ದ್ವಿಪಕ್ಷೀಯ ಸಹಕಾರ ವೃದ್ಧಿ ಕುರಿತು ಚರ್ಚೆ ನಿರೀಕ್ಷೆ**

**೩. ಸಹಕಾರಿ ವಲಯದ ಅಂತಾರಾಷ್ಟ್ರೀಯ ಸಮ್ಮೇಳನ 'ಸಹಕಾರ ಕುಂಭ ೨೦೨೫ಕ್ಕೆ' ಕೇಂದ್ರ ಸಚಿವ ಅಮಿತ್ ಶಾ ಚಾಲನೆ**

**೪. ಬಿಹಾರ ವಿಧಾನಸಭಾ ಚುನಾವಣೆ ; ಎರಡನೇ ಹಂತದಲ್ಲಿ ೧೨೨ ಕ್ಷೇತ್ರಗಳಿಗೆ ನಾಳೆ ಮತದಾನ ; ೧ ಸಾವಿರದ ೩೦೨ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರ**

***************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಲುವಾಂಡಾದಲ್ಲಿ ಅಂಗೋಲಾದ ರಾಷ್ಟ್ರೀಯ ಸಂಸತ್ತಿನಲ್ಲಿ ಅಂಗೋಲಾದ ಸಂಸದರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿ, ಅಂಗೋಲಾದೊಂದಿಗೆ ಸಂಸದೀಯ ಸಹಕಾರವನ್ನು ಹೆಚ್ಚಿಸಲು ಭಾರತ ಆಶಿಸುತ್ತಿದೆ ಎಂದು ರಾಷ್ಟ್ರಪತಿ ಅವರು ನಿನ್ನೆ ಹೇಳಿದ್ದರು. ಪರಸ್ಪರ ವಿನಿಮಯದ ಮೂಲಕ ಪ್ರಜಾಪ್ರಭುತ್ವ ಸಂಸ್ಥೆಗಳು ಪರಸ್ಪರರ ಅನುಭವದಿಂದ ಕಲಿಯುವ ಅಗತ್ಯವನ್ನು ಅವರು ಒತ್ತಿ ಹೇಳಿದ್ದರು. ಭಾರತವು ತನ್ನ ಸಂಸದೀಯ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಸಿದ್ಧವಾಗಿದೆ ಎಂದು ಅವರು ಇದೇ ವೇಳೆ ಹೇಳಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಗೋಲಾದ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಅಂಗೋಲಾದಲ್ಲಿರುವ ಭಾರತೀಯ ಸಮುದಾಯದ ಸಂಖ್ಯೆ ಸುಮಾರು ೮ ಸಾವಿರವಿದೆ. ಅಂಗೋಲಾದಲ್ಲಿ ಸುಮಾರು ೨೦೦ ಭಾರತೀಯ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜಿಸಲಾಗಿದೆ. ವಿಶೇಷವಾಗಿ ಚಿಲ್ಲರೆ ವ್ಯಾಪಾರ, ಆತಿಥ್ಯ, ಕೃಷಿ, ಪ್ಲಾಸ್ಟಿಕ್, ಲೋಹ, ಔಷಧ, ವಜ್ರಗಳು ಮತ್ತು ಆಟೋಮೊಬೈಲ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

***************

ಪ್ರಧಾನಿ ನರೇಂದ್ರ ಮೋದಿ ಭೂತಾನ್‌ಗೆ ನಾಳೆಯಿಂದ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಹಾಗೂ ಭೂತಾನ್ ದೊರೆ ಜಿಗ್ಮೆ ಕೇಸರ್ ನ್ಯಾಮಗೇಲ್ ವಾಂಗ್‌ಚುಕ್ ಜಂಟಿಯಾಗಿ ಪುನ್ಯಾತ್‌ಸ್ಯಾಂಗ್‌ಚು ಜಲವಿದ್ಯುತ್ ೨ನೇ ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ಒಂದು ಸಾವಿರದ ೨೦ ಮೆಗಾವ್ಯಾಟ್ ಸಾಮರ್ಥ್ಯದ ಈ ಜಲವಿದ್ಯುತ್ ಯೋಜನೆಯನ್ನು ಭಾರತ ಹಾಗೂ ಭೂತಾನ್ ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಪ್ರಧಾನಿಯವರು ಭೂತಾನ್‌ನ ೪ನೇ ದೊರೆ ಜಿಗ್ಮೆ ವಾಂಗ್ ಚುಕ್ ಅವರ ೭೦ನೇ ಜನ್ಮ ದಿನೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಹಾಗೂ ಭೂತಾನ್ ಪ್ರಧಾನಿ ಟೆಶೆರಿಂಗ್ ತೊಬ್ಗೆ ಅವರನ್ನು ಭೇಟಿ ಮಾಡಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದಲ್ಲಿ ಪಾಲ್ಗೊಂಡು, ಥಿಂಪುವಿನ ತಶಿಚಾಡಜೊಂಗ್‌ನಲ್ಲಿ ಇರುವ ಪವಿತ್ರ ಅವಶೇಷಗಳಿಗೆ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಪ್ರಧಾನಿಯವರ ಈ ಭೇಟಿ ಉಭಯ ದೇಶಗಳ ಪ್ರಾದೇಶಿಕ ಹಾಗೂ ಪರಸ್ಪರ ಹಿತಾಸಕ್ತಿಯ ವಿಚಾರ ಕುರಿತ ಚರ್ಚೆಗೆ ಅವಕಾಶ ಕಲ್ಪಿಸಲಿದ್ದು, ದ್ವಿಪಕ್ಷೀಯ ಸಹಭಾಗಿತ್ವ ಬಲಗೊಳ್ಳಲು ಅವಕಾಶ ಕಲ್ಪಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

***************

ಕೇಂದ್ರ ಸಹಕಾರ ಸಚಿವ ಅಮಿತ್ ಶಾ, ನವದೆಹಲಿಯಲ್ಲಿ ಇಂದು ನಗರ ಸಹಕಾರಿ ಸಾಲ ವಲಯದ ಅಂತಾರಾಷ್ಟ್ರೀಯ ಸಮ್ಮೇಳನ 'ಸಹಕಾರ ಕುಂಭ ೨೦೨೫' ಅನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಕೇಂದ್ರ ಸಚಿವರು, ಕಳೆದ ಮೂರು ನಾಲ್ಕು ವರ್ಷಗಳಲ್ಲಿ ದೇಶದ ನಗರ ಸಹಕಾರಿ ಬ್ಯಾಂಕ್‌ಗಳ ವಲಯ ಹಾಗೂ ಸಹಕಾರಿ ಸಾಲ ಒಕ್ಕೂಟಗಳೂ ವಲಯ ಹೊಸ ಹುರುಪಿನೊಂದಿಗೆ ಮುನ್ನಡೆಯಯಲು ಕ್ರಮ ಕೈಗೊಂಡಿದ್ದು, ಈ ಗುರಿ ಸಾಧಿಸುವಲ್ಲಿ ಯಶಸ್ವಿಯಾಗಿದೆ ಎಂದರು.

**ಧ್ವನಿ: ಅಮಿತ್ ಶಾ ( ೨೫ ಸೆಕೆಂಡ್ಸ್)**

ನ್ಯಾಷನಲ್ ಫೆಡರೇಶನ್ ಆಫ್ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ಸ್ ಅಂಡ್ ಕ್ರೆಡಿಟ್ ಸೊಸೈಟಿಸ್ ಮತ್ತು ಸಹಕಾರ ಸಚಿವಾಲಯ ಜಂಟಿಯಾಗಿ ಎರಡು ದಿನಗಳ ಸಮ್ಮೇಳನವನ್ನು ಆಯೋಜಿಸಿದೆ. ಡಿಜಿಟಲೀಕರಣ ಕನಸುಗಳು - ಸಮುದಾಯಗಳ ಸಬಲೀಕರಣ ಎಂಬುದು ಸಮ್ಮೇಳನದ ಧ್ಯೇಯವಾಕ್ಯವಾಗಿದೆ. ಈ ಕಾರ್ಯಕ್ರಮವು ಸಮುದಾಯಗಳನ್ನು ಸಬಲೀಕರಣಗೊಳಿಸುವ ಹಾಗು ಸಂವಾದ, ನಾವೀನ್ಯತೆ ಮತ್ತು ಹಂಚಿಕೆಯ ದೃಷ್ಟಿಕೋನದ ಮೂಲಕ ದೇಶದಲ್ಲಿ ಆರ್ಥಿಕ ಸೇರ್ಪಡೆಯ ಸಹಕಾರಿ ಅಡಿಪಾಯವನ್ನು ಬಲಪಡಿಸುವ ಗುರಿಯನ್ನು ಹೊಂದಿದೆ. ಸಮ್ಮೇಳನವು ಅಂತಾರಾಷ್ಟ್ರೀಯ ಸಹಕಾರಿ ವರ್ಷ ೨೦೨೫ ಅನ್ನು ಸಹ ಆಚರಿಸುತ್ತದೆ.

***************

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಇಂದು ಒಡಿಶಾಕ್ಕೆ ಭೇಟಿ ನೀಡಲಿದ್ದು, ರೈತರ ಆದಾಯವನ್ನು ಹೆಚ್ಚಿಸುವುದು, ಪೌಷ್ಠಿಕಾಂಶದ ಭದ್ರತೆಯನ್ನು ಖಾತರಿಪಡಿಸುವುದು ಮತ್ತು ರಾಜ್ಯದಲ್ಲಿ ನೈಸರ್ಗಿಕ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಪ್ರಮುಖ

ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಶಿವರಾಜ್ ಸಿಂಗ್ ಚೌಹಾಣ್ ಅವರು ಮಾಂಡಿಯಾ ದಿವಸ ಅಥವಾ ಸಿರಿಧಾನ್ಯ ದಿನಾಚರಣೆ ಕಾರ್ಯಕ್ರಮದ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಮತ್ತು ದೇಶದ ಇತರ ಭಾಗಗಳಲ್ಲಿ ಸಿರಿಧಾನ್ಯಗಳ ಉತ್ಪಾದನೆ, ಸಂಸ್ಕರಣೆ ಮತ್ತು ಬಳಕೆಯನ್ನು ಉತ್ತೇಜಿಸಲು ಕೇಂದ್ರದ ಉಪಕ್ರಮಗಳನ್ನು ಅವರು ಬಿಂಬಿಸಲಿದ್ದಾರೆ. ನಂತರ ಕೃಷಿ ಸಚಿವರು ಕಟಕ್ ನ ಸದರ್ ಪ್ರದೇಶಕ್ಕೆ ಭೇಟಿ ನನೀಡಲಿದ್ದಾರೆ ಮತ್ತು ರೈತರೊಂದಿಗೆ ನೇರ ಸಂವಾದ ನಡೆಸಲಿದ್ದಾರೆ.

***************

ಬಿಹಾರ ವಿಧಾನಸಭೆಯ ಎರಡನೇ ಚುನಾವಣೆಗೆ ಎಲ್ಲಾಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಈ ಹಂತದಲ್ಲಿ ೨೦ ಜಿಲ್ಲೆಗಳ ೧೨೨ ಕ್ಷೇತ್ರಗಳಿಗೆ ನಾಳೆ ಮತದಾನ ನಡೆಯಲಿದೆ. ೩ ಕೋಟಿ ೭೦ ಲಕ್ಷಕ್ಕೂ ಹೆಚ್ಚು ಮತದಾರರು ೧೩೬ ಮಹಿಳೆಯರು ಸೇರಿದಂತೆ ೧ ಸಾವಿರದ ೩೦೨ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ೭ ಕ್ಷೇತ್ರಗಳನ್ನು ಹೊರತುಪಡಿಸಿ ಬೆಳಗ್ಗೆ ೭ ಗಂಟೆಗೆ ಮತದಾನ ಪ್ರಾರಂಭವಾಗಲಿದ್ದು, ಸಂಜೆ ೬ ಗಂಟೆಗೆ ಮುಕ್ತಾಯಗೊಳ್ಳಲಿದೆ. ಈ ಹಂತದ ಬಹಿರಂಗ ಪ್ರಚಾರ ನಿನ್ನೆ ಸಂಜೆ ಕೊನೆಗೊಂಡಿತು. ಮೊದಲ ಹಂತಕ್ಕೆ ಕಳೆದ  ೬ ರಂದು ಮತದಾನ ನಡೆದಿದ್ದು, ಇದು ಸುಮಾರು ಶೇಕಡ ೬೫ ರಷ್ಟು ದಾಖಲೆ ಪ್ರಮಾಣದಲ್ಲಿ ಮತದಾನವಾಗಿದೆ. ಈ ತಿಂಗಳ ೧೪ ರಂದು ಮತ ಎಣಿಕೆ ನಡೆಯಲಿದೆ.

***************

ಬಿಹಾರ ವಿಧಾನಸಭಾ ಚುನಾವಣೆಯಲ್ಲದೆ, ೭ ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಿಗೆ ನಾಳೆ ಉಪಚುನಾವಣೆ ನಡೆಯಲಿದೆ. ಜಮ್ಮು ಮತ್ತು ಕಾಶ್ಮೀರದ ಬುದ್ಗಾಮ್ ಮತ್ತು ನಗ್ರೋಟಾ, ರಾಜಸ್ಥಾನದ ಅಂತಾ, ಜಾರ್ಖಂಡ್ ನ  ಘಟ್ಸಿಲಾ, ತೆಲಂಗಾಣದ ಜುಬಿಲಿ ಹಿಲ್ಸ್, ಪಂಜಾಬ್ ನ  ತರ್ನ್ ತರನ್, ಮಿಜೋರಾಂನ ದಂಪಾ ಮತ್ತು ಒಡಿಶಾದ ನುವಾಪಾಡಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. ಬಿಹಾರ ವಿಧಾನಸಭಾ ಚುನಾವಣೆಯ ಜೊತೆಗೆ ನವೆಂಬರ್ ೧೪ ರಂದು ಮತ ಎಣಿಕೆ ನಡೆಯಲಿದೆ.

***************

ಜಮ್ಮು ಮತ್ತು ಕಾಶ್ಮೀರ ಪೊಲೀಸರ ತಂಡವು ಹರಿಯಾಣದ ಫರಿದಾಬಾದ್ ನಿಂದ  ೩೦೦ ಕೆಜಿ ಆರ್ ಡಿಎಕ್ಸ್, ಎಕೆ -೪೭ ರೈಫಲ್ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದೆ. ಶ್ರೀನಗರದಲ್ಲಿ ಭಯೋತ್ಪಾದಕ ಸಂಘಟನೆ ಜೈಶ್-ಎ-ಮೊಹಮ್ಮದ್ ಅನ್ನು ಬೆಂಬಲಿಸುವ ಪೋಸ್ಟರ್ ಗಳನ್ನು ಹಾಕಿದ ಆರೋಪದ ಮೇಲೆ ಉತ್ತರ ಪ್ರದೇಶದ ಸಹರಾನ್ಪುರದಿಂದ ಕಾಶ್ಮೀರಿ ವೈದ್ಯನನ್ನು ಪೊಲೀಸರು ಬಂಧಿಸಿದ ಕೆಲವೇ ದಿನಗಳ ನಂತರ ಈ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಲಾಗಿದೆ. ಡಾ.ಆದಿಲ್ ಅಹ್ಮದ್ ರಾಥರ್ ವಿಚಾರಣೆಯ ಸಮಯದಲ್ಲಿ ಬಹಿರಂಗಪಡಿಸಿದ ನಂತರ ಫರಿದಾಬಾದ್ ನಲ್ಲಿ ಈ ಘಟನೆ ನಡೆದಿದೆ.

***************

ಖ್ಯಾತ ಕವಿ ಮತ್ತು ಗೀತರಚನೆಕಾರ ಹಾಗೂ ಅಪ್ರತಿಮ ತೆಲಂಗಾಣ ರಾಜ್ಯ ಗೀತೆಯ ಲೇಖಕ ಆಂಡೆ ಶ್ರೀ, ಹೈದರಾಬಾದ್ ನಲ್ಲಿ ಇಂದು ನಿಧನರಾಗಿದ್ದಾರೆ. ಅವರಿಗೆ ೬೪ ವರ್ಷ ವಯಸ್ಸಾಗಿತ್ತು. ಅನಾರೋಗ್ಯಗದ ಕಾರಣ ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಅವರು ನಿಧನರಾಗಿದ್ದಾರೆ. ೧೯೬೧ರಲ್ಲಿ ಸಿದ್ದಿಪೇಟೆ ಜಿಲ್ಲೆಯ ರೇಬರ್ತಿ ಗ್ರಾಮದಲ್ಲಿ ಆಂಡೆ ಯೆಲ್ಲಣ್ಣ ಎಂಬ ಹೆಸರಿನಲ್ಲಿ ಜನಿಸಿದ ಆಂಡೆ ಶ್ರೀ ತೆಲುಗು ಸಾಹಿತ್ಯದ ಅತ್ಯಂತ ಪ್ರಸಿದ್ಧ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಅವರು ಬರೆದ "ಜಯ ಜಯಹೆ ತೆಲಂಗಾಣ", ಇದು ಪ್ರತ್ಯೇಕ ರಾಜ್ಯದ ಚಳವಳಿಯ ಸಮಯದಲ್ಲಿ ಲಕ್ಷಾಂತರ ಜನರ ಧ್ವನಿಯಾಗಿತ್ತು ಮತ್ತು ಅದನ್ನು ಅಧಿಕೃತ ರಾಜ್ಯಗೀತೆಯಾಗಿ ಸ್ವೀಕರಿಸಲಾಗಿದೆ.

***************

ಬಹುಪತ್ನಿತ್ವವನ್ನು ನಿಷೇಧಿಸುವ ಮಸೂದೆಗೆ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಯಾವುದೇ ವ್ಯಕ್ತಿಯು ಈಗಾಗಲೇ ಜೀವಂತ ಸಂಗಾತಿಯನ್ನು ಹೊಂದಿದ್ದರೆ, ಕಾನೂನುಬದ್ಧವಾಗಿ ಬೇರ್ಪಡದಿದ್ದರೆ ಅಥವಾ ಅವರ ಹಿಂದಿನ ಮದುವೆಯನ್ನು ವಿಚ್ಛೇದನದ ಆದೇಶದ ಮೂಲಕ ವಿಸರ್ಜಿಸದಿದ್ದರೆ ಬೇರೊಂದು ಮದುವೆಯಾಗುವುದನ್ನು ಈ ಮಸೂದೆ ನಿಷೇಧಿಸುತ್ತದೆ. ಆದಾಗ್ಯೂ, ಆರನೇ ಶೆಡ್ಯೂಲ್ ಪ್ರದೇಶಗಳಿಗೆ ಕೆಲವು ವಿನಾಯಿತಿಗಳು ಇರಬಹುದು. ಈ ಮಸೂದೆಯನ್ನು 'ಅಸ್ಸಾಂ ಬಹುಪತ್ನಿತ್ವ ನಿಷೇಧ ಮಸೂದೆ-೨೦೨೫' ಎಂದು ಹೆಸರಿಸಲಾಗಿದೆ. ಕ್ಯಾಬಿನೆಟ್ ಸಭೆಯ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶರ್ಮಾ, ಇದನ್ನು ಅಂಗೀಕರಿಸಲು ಈ ತಿಂಗಳ ೨೫ ರಂದು ವಿಧಾನಸಭೆಯಲ್ಲಿ ಮಂಡಿಸಲಾಗುವುದು ಎಂದು ಹೇಳಿದ್ದಾರೆ.

********* ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **********

**********ನಮ್ಮ ಮುಂದಿನ ವಾರ್ತಾ ಪ್ರಸಾರ ೨.೩೦ ಕ್ಕೆ *********